# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 873 (880)

2) ಸದಸ್ಯರ ಹೆಸರು : ಶ್ರೀಮತಿ ಎಸ್.ವೀಣಾ ಅಚ್ಚಯ್ಯ
(ವಿಧಾನ ಸಭೆ ಕ್ಷೇತ್ರದಿಂದ ಚುನಾಯಿತರಾದವರು)

3) ಉತ್ತರಿಸುವ ದಿನಾಂಕ : 28-09-2020

4) ಉತ್ತರಿಸುವವರು : ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೊಡಗು ಜಿಲ್ಲೆಯ ಹಲವಾರು ತೋಟಗಳಲ್ಲಿ ಕಾಡಾನೆಗಳು ಬೀಡು ಬಿಟ್ಟಿರುವುದರಿಂದ ರೈತರು ಹಾಗೂ ಕಾಫಿ ಬೆಳೆಗಾರರಿಗೆ ನಿರಂತರವಾಗಿ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು. |
| ಆ) | ಬಂದಿದ್ದಲ್ಲಿ, ಪ್ರಸ್ತುತ ವರ್ಷದಲ್ಲಿ ಎಷ್ಟು ಕಾಡಾನೆಗಳನ್ನು ಹಿಡಿಯಲು ಅನುಮತಿ ನೀಡಲಾಗಿದೆ; | ಪ್ರಸ್ತುತ ವರ್ಷದಲ್ಲಿ ಎರಡು ಕಾಡಾನೆಗಳನ್ನು ಸೆರೆಹಿಡಿಯಲು ಅನುಮತಿ ನೀಡಲಾಗಿರುತ್ತದೆ. |
| ಇ) | ಕಳೆದ ಮೂರು ವರ್ಷಗಳಲ್ಲಿ ಎಷ್ಟು ಕಾಡಾನೆಗಳನ್ನು ಹಿಡಿದು ಸುರಕ್ಷಿತ ಪ್ರದೇಶಕ್ಕೆ ಸ್ಥಳಾಂತರ ಮಾಡಲಾಗಿದೆ?<br>(ವರ್ಷವಾರು ಮಾಹಿತಿ ನೀಡುವುದು) | ಕಳೆದ ಮೂರು ವರ್ಷಗಳಲ್ಲಿ ಸೆರೆ ಹಿಡಿಯಲಾದ ಕಾಡಾನೆಗಳ ಸಂಖ್ಯೆ, ಸೆರೆ ಹಿಡಿದ ವರ್ಷ ಮತ್ತು ಬಿಡಲಾದ ಸ್ಥಳದ ವಿವರ ಈ ಕೆಳಕಂಡಂತಿದೆ. |

| ವಿಭಾಗ | ವರ್ಷ | ಸೆರೆ ಹಿಡಿಯಲಾದ ಆನೆಗಳ ಸಂಖ್ಯೆ | ಕಾಡಾನೆಯನ್ನು ಹಿಡಿದು ಸ್ಥಳಾಂತರಿಸಿದ ಮಾಹಿತಿ |
|---|---|---|---|
| ಮಡಿಕೇರಿ | 2017-18 | 1 | ಆನೆಕಾಡು ಮೀಸಲು ಅರಣ್ಯದ ಮಟ್ನಳ್ಳ ಪೈಸಾರಿಯಲ್ಲಿ ಕಾಡಾನೆಯನ್ನು ಹಿಡಿದು ಮೂಲೆಹೊಳೆಗೆ ಸಾಗಿಸಲಾಗಿದೆ. |
| ವೀರಾಜಪೇಟೆ ವನ್ಯಜೀವಿ ವಿಭಾಗ | | – | – |
| ಒಟ್ಟು | | 1 | – |
| ಮಡಿಕೇರಿ | 2018-19 | 1 | ಹೊದ್ದೂರು ಗ್ರಾಮದ ಲಲಿತಾದ್ರಿ ಎಸ್ಟೇಟ್‌ನ ಗದ್ದೆಯಲ್ಲಿ ಸೆರೆ ಹಿಡಿದು ದುಬಾರೆ ಆನೆ ಶಿಬಿರಕ್ಕೆ ಸಾಗಿಸಲಾಗಿದೆ. |
| ವೀರಾಜಪೇಟೆ ವನ್ಯಜೀವಿ ವಿಭಾಗ | | 2 | ಒಂದು ಗಂಡು ಮತ್ತು ಒಂದು ಹೆಣ್ಣಾನೆಯನ್ನು ಮತ್ತಿಗೋಡು ಸಾಕಾನೆ ಶಿಬಿರಕ್ಕೆ ಸಾಗಿಸಲಾಗಿರುತ್ತದೆ. |
| ಒಟ್ಟು | | 3 | |
| ಮಡಿಕೇರಿ | 2019-20 | 2 | ಒಂದು ಹೆಣ್ಣಾನೆಯನ್ನು ಮೇರಿಲ್ಯಾಂಡ್ ಕಾಫಿತೋಟ ಸ.ಸಂ. 25-24 ರಲ್ಲಿ ಹಿಡಿದು ನಾಗರಹೊಳೆ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯ ಕಾಕನಕೋಟೆ ಮೀಸಲು ಅರಣ್ಯ ಪ್ರದೇಶಕ್ಕೆ ಬಿಡಲಾಗಿರುತ್ತದೆ.<br><br>ಒಂದು ಗಂಡಾನೆಯನ್ನು ನಂಜರಾಯಪಟ್ಟಣ ಗಸ್ತಿನ ಚೇರಳ ಶ್ರೀಮಂಗಲ ಗ್ರಾಮದ ಕಾಫಿ ಬೋರ್ಡ್ ಕಾಫಿ ಎಸ್ಟೇಟ್ ಸ.ನಂ. 50/1 ರಲ್ಲಿ ಹಿಡಿದು ದುಬಾರೆ ಸಾಕಾನೆ ಶಿಬಿರಕ್ಕೆ ಬಿಡಲಾಗಿರುತ್ತದೆ. |
| ವೀರಾಜಪೇಟೆ ವನ್ಯಜೀವಿ ವಿಭಾಗ | | 1 | ಶ್ರೀಮಂಗಲ ವನ್ಯಜೀವಿ ವಲಯದ ಕುರ್ಚಿಗ್ರಾಮದ ಕಾಫಿತೋಟದಿಂದ ಕಾಡಾನೆಯನ್ನು ಹಿಡಿದು ದುಬಾರೆ ಆನೆ ಶಿಬಿರಕ್ಕೆ ಸಾಗಿಸಲಾಗಿರುತ್ತದೆ. |
| ಒಟ್ಟು | | 3 | |

ಸಂಖ್ಯೆ: ಅಪಜೀ 160 ಎಫ್‌ಡಬ್ಲ್ಯೂಎಲ್ 2020

(ಆನಂದ್ ಸಿಂಗ್)
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು